# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. : 15 ಫ್ರಾ.ಸಾ. : 27**

| | | |
|---|---|---|
| ಸಾಕ್ಷಿಯ ಹೆಸರು | : | ತುಕಾರಾಮ ಗಣಪತಿ ಹರಿಕಂತ್ರ |
| ತಂದೆಯ ಹೆಸರು | : | ಗಣಪತಿ ಹರಿಕಂತ್ರ |
| ವಯಸ್ಸು | : | 51 ವರ್ಷ |
| ಕೆಲಸ | : | ಮೀನುಗಾರಿಕೆ |
| ವಾಸ | : | ಕಾರವಾರ |

**ದಿನಾಂಕಃ 12-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. ಸಾಕ್ಷಿಗೆ ಈಗ ತೋರಿಸಿದ ಅಂಗಶೋಧನಾ ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-62 ಎಂದು, ಸಾಕ್ಷಿಯ ಸಹಿಯನ್ನು ನಿಪಿ-62(ಎ) ಎಂದು ಗುರುತಿಸಲಾಯಿತು. ಸುಮಾರು 5-6 ವರ್ಷಗಳ ಹಿಂದೆ ಕಾರವಾರದ ಪೊಲೀಸರು ಕಾರವಾರದ ಠಾಣೆಗೆ ಬರುವಂತೆ ತಿಳಿಸಿದ್ದು, ಅದರಂತೆ ನಾನು ಠಾಣೆಗೆ ಹೋದಾಗ, ಖಾಲಿ ಹಾಳೆಯ ಮೇಲೆ ಸಹಿ ಪಡೆದುಕೊಂಡಿರುತ್ತಾರೆ ಹಾಗೂ ಫೋಟೊ ತೆಗೆದುಕೊಂಡರು. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲ. ಈಗ ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯು ಆದಿನ ನಾನು ಠಾಣೆಯಲ್ಲಿ ನೋಡಿರುತ್ತೇನೆ. ಸಾಕ್ಷಿಗೆ ಈಗ ತೋರಿಸಿದ ಫೋಟೊದಲ್ಲಿ ಸಾಕ್ಷಿಯು 1 ನೇ ಆರೋಪಿಯನ್ನು ನೋಡಿ ಗುರುತಿಸಿದ್ದು, ಫೋಟೊವನ್ನು ನಿಪಿ-63 ಎಂದು ಗುರುತಿಸಲಾಯಿತು. ಫೋಟೊ ಯಾವ ಕಾರಣಕ್ಕಾಗಿ ತೆಗೆದರು ಎಂದು ನನಗೆ ಗೊತ್ತಿಲ್ಲ.

2. ಸಾಕ್ಷಿಗೆ ಈಗ ತೋರಿಸಿದ ಇನ್ನೊಂದು ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿಪಿ-64 ಎಂದು, ಸಾಕ್ಷಿಯ ಸಹಿಯನ್ನು ನಿಪಿ-64(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನೂ ಸಹ ನಾನು ಖಾಲಿ ಹಾಳೆಯ

ಮೇಲೆ ಮಾಡಿರುತ್ತೇನೆ. ಸಾಕ್ಷಿಗೆ ಈಗ ತೋರಿಸಿದ ಜೆರಾಕ್ಸ್ ರೈಲ್ವೇ ಟಿಕೆಟ್‌ನ ಆರು ಪುಟಗಳಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ–65 ರಿಂದ ನಿಪಿ–70 ಎಂದು, ಅವುಗಳಲ್ಲಿರುವ ಸಹಿಯನ್ನು ನಿಪಿ–65(ಎ) ರಿಂದ 70(ಎ) ಎಂದು ಗುರುತಿಸಲಾಯಿತು. ಸಾಕ್ಷಿಗಳು ಮುಂದುವರಿದು, ಸದರಿ ಸಹಿಗಳನ್ನೂ ಸಹ ಖಾಲಿ ಹಾಳೆಯ ಮೇಲೆ ತೆಗೆದುಕೊಳ್ಳಲಾಗಿತ್ತು ಎಂದು ನುಡಿಯುತ್ತಾರೆ.

3. ಸಾಕ್ಷಿಗೆ ಈಗ ತೊರಿಸಿದ ನೋಟಿಸಿನ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ನೋಟಿಸನ್ನು ನಿಪಿ–71 ಎಂದು, ಸಾಕ್ಷಿಯ ಸಹಿಯನ್ನು ನಿಪಿ–71(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ತೊರಿಸಿದ ವಾಹನ ಜಪ್ತು ಪಂಚನಾಮೆಯ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ವಾಹನ ಜಪ್ತು ಪಂಚನಾಮೆಯನ್ನು ನಿಪಿ–72 ಎಂದು, ಸಾಕ್ಷಿಯ ಸಹಿಯನ್ನು ನಿಪಿ–72(ಎ) ಎಂದು ಗುರುತಿಸಲಾಯಿತು. ಸುಮಾರು 6 ವರ್ಷಗಳ ಹಿಂದೆ ಪೊಲೀಸರು ಪಂಚನಾಮೆಗಾಗಿ ನೋಟಿಸ್ ನೀಡಿದ್ದು, ಅದರಂತೆ ನಾನು ಠಾಣೆಗೆ ಹೋದಾಗ ಅಲ್ಲಿ ಒಂದು ವಾಹನವನ್ನು ನಿಲ್ಲಿಸಿ, ಫೋಟೊ ತೆಗೆದಿರುತ್ತಾರೆ. ಅದನ್ನು ಯಾರು ತಂದು ಹಾಜರುಪಡಿಸಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ವಾಹನವನ್ನು ಪೊಲೀಸರು ಪಂಚನಾಮೆಯ ಮೂಲಕ ಜಪ್ತುಪಡಿಸಿಕೊಂಡರು. ಸದರಿ ವಾಹನವನ್ನು ಫೋಟೊದಲ್ಲಿ ಸಾಕ್ಷಿಯು ನೋಡಿ ಗುರುತಿಸಿದ್ದು ಹಾಗೂ ತನ್ನ ಇರುವಿಕೆಯನ್ನೂ ಸಹ ಗುರುತಿಸಿರುತ್ತಾರೆ. ಸದರಿ ಫೊಟೋವನ್ನು ನಿಪಿ–73 ಎಂದು ಗುರುತಿಸಲಾಯಿತು.

4. ನಂತರ ಸಾಕ್ಷಿಗೆ ಈಗ ತೊರಿಸಿದ ಇನ್ನೊಂದು ವಾಹನ ಜಪ್ತು ಪಂಚನಾಮೆಯ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಜಪ್ತು ಪಂಚನಾಮೆಯನ್ನು ನಿಪಿ–74 ಎಂದು, ಸಾಕ್ಷಿಯ ಸಹಿಯನ್ನು ನಿಪಿ–74(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ತೋರಿಸಿದ ಫೋಟೊದಲ್ಲಿ ತನ್ನ ಇರುವಿಕೆಯನ್ನು ಹಾಗೂ ವಾಹನವನ್ನು ನೋಡಿ ಗುರುತಿಸಿದ್ದು, ಫೋಟೊವನ್ನು ನಿಪಿ–75 ಎಂದು ಗುರುತಿಸಲಾಯಿತು. ಫೋಟೊದಲ್ಲಿ ಕಾಣುತ್ತಿರುವ ವಾಹನವನ್ನು ಯಾರು ತಂದು ಹಾಜರುಪಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಆದರೆ ಪೊಲೀಸರು ಸದರಿ ವಾಹನವನ್ನು ಪಂಚನಾಮೆ ಮಾಡಿ ಜಪ್ತುಪಡಿಸಿಕೊಂಡಿರುತ್ತಾರೆ. ಪೊಲೀಸರು ವಾಹನಗಳನ್ನು ಯಾವ ಕಾರಣಕ್ಕಾಗಿ ಜಪ್ತುಪಡಿಸಿಕೊಂಡಿದ್ದರು ಎಂದು ನನಗೆ

ಗೊತ್ತಿಲ್ಲ. (ಮೇಲೆ ಹೇಳಿದ ವಾಹನಗಳ ಮಾಲೀಕರು ವಾಹನಗಳನ್ನು ಈಗಾಗಲೇ ನ್ಯಾಯಾಲಯದಿಂದ ಬಿಡಿಸಿಕೊಂಡು ಹೋಗಿರುತ್ತಾರೆ.)

5. ಈಗ ನ್ಯಾಯಾಲಯದ ಮುಂದಿರುವ ವಸ್ತುಗಳನ್ನು ನಾನು ಆ ದಿನ ಠಾಣೆಯಲ್ಲಿ ನೋಡಿರುತ್ತೇನೆ. ಲಿವೈಸ್ ಕಂಪನಿಯ ಪರ್ಸನ್ನು ನೋಡಿ ಗುರುತಿಸಿದ್ದು, ಅದನ್ನು ಮುದ್ದೆಮಾಲು ನಂ.14 ಎಂದು ಗುರುತಿಸಲಾಯಿತು. ಸದರಿ ಪರ್ಸ್ ನಲ್ಲಿದ್ದ ಒಟ್ಟು 15 ರೈಲ್ವೇ ಟಿಕೇಟುಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-76 ರಿಂದ ಪಿ-90 ಎಂದು ಗುರುತಿಸಲಾಯಿತು. ಅದೇ ರೀತಿ ಪರ್ಸ್ ನಲ್ಲಿದ್ದ ರೂ.1,470/- ಗಳನ್ನು (ರೂ.500X2, ರೂ.100X4, ರೂ.50X1, ರೂ.10X2=1,470/-) ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ಮುದ್ದೆಮಾಲು ನಂ.15 ಎಂದು ಗುರುತಿಸಲಾಯಿತು. ಒಂದು Ncell Sim ನ್ನು ತೋರಿಸಲಾಗಿ, ಸಾಕ್ಷಿಯು ಇರಬಹುದು ಎಂದು ನುಡಿದಿದ್ದು, ಅದನ್ನು ಮುದ್ದೆಮಾಲು ನಂ.16 ಎಂದು ಗುರುತಿಸಲಾಯಿತು. ಬಿಳಿ ಮತ್ತು ನೀಲಿ ಬಣ್ಣದ ನೋಕಿಯಾ ಮೊಬೈಲನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಮುದ್ದೆಮಾಲು ನಂ.17 ಎಂದು ಗುರುತಿಸಲಾಯಿತು. ನೀಲಿ ಬಣ್ಣದ ಟ್ರಾವೆಲ್ ಬ್ಯಾಗ್ ಒಂದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಮುದ್ದೆಮಾಲು ನಂ.18 ಎಂದು ಗುರುತಿಸಲಾಯಿತು. ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ನಾನು ವೃತ್ತಿಯಲ್ಲಿ ಮೀನು ಹಿಡಿಯುವುದು ಹಾಗೂ ಮೀನು ಮಾರಾಟ ಮಾಡುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ**

6. ದಿ.04-12-2018 ರಂದು ನನ್ನನ್ನು ಪೊಲೀಸರು ಠಾಣೆಗೆ ಕರೆಸಿದ್ದರು ಎಂದರೆ ಸಾಕ್ಷಿಯು, ದಿನಾಂಕ ನನಗೆ ನೆನಪಿಲ್ಲ, ಆದರೆ ಆದಿನ ನಾನು ಠಾಣೆಗೆ ಹೋದಾಗ ರಾತ್ರಿಯಾಗಿತ್ತು ಎಂದು ನುಡಿಯುತ್ತಾರೆ. ನಾನು ಠಾಣೆಗೆ ಹೋದ ಸಮಯದಲ್ಲಿ 1 ನೇ ಆರೋಪಿಯ ಅಂಗಶೋಧನೆ ನಡೆಸಿ, ಆತನ ಕಿಸೆಯಿಂದ ಜಪ್ತುಪಡಿಸಿಕೊಂಡ ಮುದ್ದೆಮಾಲು

ನಂ.14 ಪರ್ಸನಲ್ಲಿ ನಿಪಿ-76 ರಿಂದ 90 ರೈಲ್ವೇ ಟಿಕೇಟುಗಳು, ಮುದ್ದೆಮಾಲು ನಂ.15 ರೂ.1,470/- ಹಣ, ಮುದ್ದೆಮಾಲು ನಂ.16 ಸಿಮ್ ಇವುಗಳನ್ನು ಜಪ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಮತ್ತೊಂದು ಕಿಸೆಯಿಂದ ಮುದ್ದೆಮಾಲು ನಂ.17 ಮೊಬೈಲನ್ನು ಹಾಗೂ ಆತನ ಬಳಿಯಿದ್ದ ಮುದ್ದೆಮಾಲು ನಂ.14 ಟ್ರಾವೆಲ್ ಬ್ಯಾಗನ್ನು ಜಪ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಪರ್ಸ್ ನಲ್ಲಿ 1 ನೇ ಆರೋಪಿಗೆ ಸೇರಿದ ಒಂದು ಸ್ಟೇಟ್ ಬ್ಯಾಂಕಿನ ಡೆಬಿಟ್ ಕಾರ್ಡನ್ನೂ ಸಹ ಜಪ್ತುಪಡಿಸಿಕೊಂಡಿದ್ದರು ಎಂದರೆ ಸಾಕ್ಷಿಯು ಆಗ ರಾತ್ರಿಯಾಗಿದ್ದರಿಂದ ಗಮನಿಸಿರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿಯಿಂದ ಜಪ್ತುಪಡಿಸಿಕೊಂಡ ಮುದ್ದೆಮಾಲು ನಂ.18 ಬ್ಯಾಗಿನಲ್ಲಿ ಒಂದು ಗುಲಾಬಿ ಬಣ್ಣದ ಶರ್ಟ್, ಒಂದು ನೀಲಿ ಬಣ್ಣದ ಜೀನ್ಸ್ ಪ್ಯಾಂಟ್, ಒಂದು ಬಿಳಿ ಬಣ್ಣದ ಚೌಕಳಿಯ ಲುಂಗಿ, ಒಂದು ಮನಿ ಟ್ರಾನ್ಸ್‌ಫರ್ ರಿಸಿಪ್ಟ್, 1 ನೇ ಆರೋಪಿಯ ಡ್ರೈವಿಂಗ್ ಲೈಸೆನ್ಸ್ ಮತ್ತು ಆಧಾರ ಕಾರ್ಡು, ಒಂದು ಸ್ಯಾಮ್‌ಸಂಗ್ ಮೊಬೈಲ್ ಮತ್ತು ಅದರ ಚಾರ್ಜರ್ ಸಹ ಇದ್ದವು ಎಂದರೆ ಸಾಕ್ಷಿಯು ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಆನಂತರ ಪೊಲೀಸರು ಸದರಿ ವಸ್ತುಗಳನ್ನು ಜಪ್ತುಪಡಿಸಿಕೊಂಡು, ಪಂಚನಾಮೆ ಮಾಡಿ, ನನ್ನ ಸಹಿಯನ್ನು ಪಡೆದುಕೊಂಡರು ಎಂದರೆ ಸರಿ.

7. ಜಪ್ತುಪಡಿಸಿಕೊಂಡ ಟಿಕೇಟುಗಳು ಅಳಿಸಿ ಹೋಗುತ್ತವೆ ಎಂಬ ಕಾರಣಕ್ಕೆ ಪೊಲೀಸರು ಅವುಗಳನ್ನು ಜೆರಾಕ್ಸ್ ಮಾಡಿ, ಅವುಗಳ ಮೇಲೆ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಖಾಲಿ ಹಾಳೆಯ ಮೇಲೆ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಿ.07-12-2018 ರಂದು ಪೊಲೀಸರು ಪನಃ ನನ್ನನ್ನು ಪೊಲೀಸ್ ಠಾಣೆಗೆ ಕರೆಸಿದ್ದರು ಎಂದರೆ ಸರಿ. ಅಲ್ಲಿ ವಾಹನದ ಮಾಲೀಕರಾದ ಚಾಸಾ-36 ಮೋಹನದಾಸ ಮಂಗೇಶ ಶಿರೋಡ್ಕರ್ ರವರು ಹಾಜರಿದ್ದು, ದಿ.19-10-2018 ರಂದು 1 ನೇ ಆರೋಪಿಯು, ತಾನು ಗೋವಾಗೆ ಹೋಗಬೇಕಾಗಿದೆ ಎಂದು ಹೇಳಿ, ಕಾರನ್ನು ಕೇಳಿದ್ದು, ಅದನ್ನು 4 ನೇ ಆರೋಪಿ ಚಲಾಯಿಸಿಕೊಂಡು ಹೋಗಿ ನಂತರ ಪುನಃ ವಾಪಾಸು ತಂದು ನೀಡಿರುತ್ತಾರೆ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿಯು, ಆ ವಿಷಯದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಕಾರನ್ನು ಪರಿಶೀಲಿಸಿದಾಗ ಅದು ಮಹೀಂದ್ರಾ ಕಂಪನಿಯ ಕಾರಾಗಿದ್ದು, ಅದರ ನೋಂದಣಿ ಸಂಖ್ಯೆ ಕೆಎ-19/ಎಂ.ಎಫ್-9020 ಆಗಿರುತ್ತದೆ ಹಾಗೂ ಅದರ ಮಾಲೀಕರ ಹೆಸರು The partner, M/s Alvares and Thomas Alvares Centre

Nanthoor, Mangalore ಎಂದು ಇರುತ್ತದೆ ಎಂದರೆ ಸಾಕ್ಷಿಯು, ಸದರಿ ಗಾಡಿಯು ಫೋಟೊದಲ್ಲಿರುತ್ತದೆ, ಆದರೆ ಆ ಗಾಡಿಯ ನಂಬರು ಈಗ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

8. ಸದರಿ ಪಂಚನಾಮೆಯ ನಂತರ 1 ನೇ ಆರೋಪಿಯು ತಾನು ಮೃತ ಪ್ರೇಮ್ ನಾಯರ್ ನನ್ನು ಕೊಲೆ ಮಾಡಿಸುವ ಸಲುವಾಗಿ, ಸಂಚು ರೂಪಿಸಲು ಬಳಸಿದ ಕಾರನ್ನು ಬೈತ್ ಕೋಲ್ ನ ಅಲಿಗದ್ದದಲ್ಲಿರುವ ತನ್ನ ಶಿಪ್ಪಿಂಗ್ ಕಂಪನಿಯ ಮುಂದೆ ಇಟ್ಟಿರುವುದಾಗಿ ಹಾಗೂ ಬಂದರೆ, ಅದನ್ನು ತೋರಿಸುವುದಾಗಿ ಹೇಳಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಕಾರನ್ನು 4 ನೇ ಆರೋಪಿಯ ಮೂಲಕ ಕಾರವಾರದಿಂದ ದಾಂಡೇಲಿಗೆ ಚಲಾಯಿಸಿಕೊಂಡು ಹೋಗಿದ್ದಾಗಿ ಹೇಳಿರುತ್ತಾನೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆನಂತರ 1 ನೇ ಆರೋಪಿಯು ನಮ್ಮನ್ನು ತನ್ನ ಶಿಪ್ಪಿಂಗ್ ಕಂಪನಿಯ ಬಳಿ ಕರೆದುಕೊಂಡು ಹೋಗಿ, ಅಲ್ಲಿ ತಾನು ನಿಲ್ಲಿಸಿಟ್ಟ ಕಾರನ್ನು ತೋರಿಸಿರುತ್ತಾನೆ ಎಂದರೆ ಸರಿ. ಅಲ್ಲಿ ಪೊಲೀಸರು ನಿಪಿ–75 ಫೋಟೊದಲ್ಲಿ ಕಾಣುತ್ತಿರುವ ಕಾರನ್ನು ಜಪ್ತುಪಡಿಸಿಕೊಂಡರು ಹಾಗೂ ಅದಕ್ಕೆ ನನ್ನ ಸಹಿಯನ್ನು ಪಡೆದುಕೊಂಡರು ಎಂದರೆ ಸರಿ. ನನ್ನ ಜೀವನದಲ್ಲಿ ಎಷ್ಟು ಖಾಲಿ ಹಾಳೆಯ ಮೇಲೆ ಸಹಿ ಮಾಡಿ, ನೀಡಿರುತ್ತೇನೆ ಎಂದು ನನಗೆ ನೆನಪಿಲ್ಲ. ನಾನು ಮೀನಿನ ವ್ಯಾಪಾರ ಮಾಡುವುದರಿಂದ, ನನಗೆ ವ್ಯವಹಾರ ಜ್ಞಾನ ಇರುತ್ತದೆ. ಯಾವುದಾದರೂ ಹಾಳೆಗೆ ಸಹಿ ಮಾಡುವ ಮೊದಲು ಅದನ್ನು ಓದಿ ಸಹಿ ಮಾಡಬೇಕೆಂಬ ಕನಿಷ್ಟ ಜ್ಞಾನ ನನಗೆ ಇದೆ. ಖಾಲಿ ಹಾಳೆಯ ಮೇಲೆ ಸಹಿ ಮಾಡಿ ನೀಡಿದರೆ, ಅದರಿಂದಾಗುವ ಪರಿಣಾಮದ ಬಗ್ಗೆಯೂ ನನಗೆ ಗೊತ್ತಿರುತ್ತದೆ. ನನ್ನ ಸಮಕ್ಷಮ ಪೊಲೀಸರು ಬ್ಯಾಗಿನಲ್ಲಿದ್ದ ವಸ್ತುಗಳನ್ನು ಜಪ್ತುಪಡಿಸಿಕೊಂಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು, ನಾನು ನೋಡಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

9. ನನಗೆ ತೋರಿಸಿದ ಎಲ್ಲಾ ಪಂಚನಾಮೆ ಹಾಗೂ ನೋಟಿಸುಗಳಿಗೆ ನನ್ನಿಂದ ಖಾಲಿ ಹಾಳೆಯ ಮೇಲೆ ಸಹಿ ಪಡೆದಿರುತ್ತಾರೆ ಎಂದರೆ ಸರಿ. ನಾವು ಅಲಿಗದ್ದಾಗೆ ಹೋಗುವ ಮೊದಲೇ ಪೊಲೀಸರು ಅಲ್ಲಿ ಹಾಜರಿದ್ದರು. ಅಲಿಗದ್ದಾಗೆ ಕಾರನ್ನು ಜಪ್ತುಪಡಿಸಿಕೊಳ್ಳುವ ಕಾಲಕ್ಕೆ ಪೊಲೀಸರು ಅಲ್ಲಿಗೆ ಕರೆದುಕೊಂಡು ಹೋಗಿರುತ್ತಾರೆ. ಫೋಟೊಗಳನ್ನು ಯಾಕೆ ತೆಗೆದರು

ಎಂದು ಗೊತ್ತಿದೆಯಾ ಎಂದರೆ ಸಾಕ್ಷಿಯು, ವಾಹನಗಳನ್ನು ಜಪ್ತುಪಡಿಸಿಕೊಳ್ಳುವ ಕಾಲಕ್ಕೆ ಫೋಟೊ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ಈ ದಿನ ನ್ಯಾಯಾಲಯದ ಮುಂದಿರುವ ಮುದ್ದೆಮಾಲುಗಳನ್ನು ಈ ದಿನ ಮೊದಲನೇ ಬಾರಿಗೆ ನೋಡುತ್ತಿದ್ದೀರಾ ಎಂದರೆ ಸಾಕ್ಷಿಯು ಅವುಗಳನ್ನು ಠಾಣೆಯಲ್ಲಿ ಈ ಮೊದಲು ನೋಡಿರುವುದಾಗಿ ನುಡಿಯುತ್ತಾರೆ. ಠಾಣೆಯಲ್ಲಿದ್ದ ಮುದ್ದೆಮಾಲುಗಳು ಯಾವಾಗಿನಿಂದ ಅಲ್ಲಿ ಇದ್ದವು ಎಂದು ನನಗೆ ಗೊತ್ತಿಲ್ಲ. ಮುದ್ದೆಮಾಲುಗಳು ಯಾವಾಗಿನಿಂದ ಇದ್ದವು ಹಾಗೂ ಅವುಗಳನ್ನು ಯಾರು ತಂದಿದ್ದರು ಎಂದು ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ